ದಿನಾಂಕಃ 29-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಐ.ಎನ್.ಎನ್ ಆರೋಪಿ ಪರ ವಕೀಲರಿಂದಃ

ನನ್ನ ನೋಟೀಸ್ ನಲ್ಲಿ ಬರೆದಿರುವ ಅಂಶಗಳ ಮಾಹಿತಿಯನ್ನು ಅವರೇ ಬರೆದುಕೊಂಡರು. ಸಾಕ್ಷಿಯು ಮುಂದುವರೆದು ನಾನು ಚೆಕ್ ಅನ್ನು ನೀಡಿದ ಬಗ್ಗೆ ವಿಚಾರಗಳನ್ನು ತಿಳಿಸಿದೆ ಎಂದು ನುಡಿಯುತ್ತಾರೆ. ನನ್ನ ಖಾಸಗಿ ದೂರಿನಲ್ಲಿ ಬರೆದಿರುವ ಅಂಶಗಳ ಮಾಹಿತಿಗಳನ್ನು ನಾನೇ ನೀಡಿರುತ್ತೇನೆ. ನನ್ನ ಖಾಸಗಿ ದೂರು, ತಿಳುವಳಿಕೆ ಪತ್ರ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಒಂದೇ ಆಗಿರುತ್ತದೆ. ನಾನು ಟ್ರ್ಯಾಕ್ಟರ್- ಬಸ್ಸುಗಳಿಗೆ ಸಂಬಂಧಪಟ್ಟಂತೆ ಮೆಕ್ಯಾನಿಕ್/ಎಲೆಕ್ಟ್ರಿಶಿಯನ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಅಭಿಲಾಷ ಲೇಔಟ್ ನಲ್ಲಿ ಗರಾಜ್ ಅನ್ನು ಇಟ್ಟುಕೊಂಡಿದ್ದೆನು. ನಾನು 15 ವರ್ಷಗಳಿಂದ ಮೆಕ್ಯಾನಿಕ್ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುದುವರೆದು 6 ತಿಂಗಳಿನಿಂದ ಮೆಕ್ಯಾನಿಕ್ ಕೆಲಸ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಯಾವ ದಾಖಲೆಗಳನ್ನು ಹಾಜರುಪಡಿಸಿರುವಿರಿ? ಎಂಬ ಪ್ರಶ್ನೆಗೆ ಸಾಕ್ಷಿ ಚೆಕ್ ಮತ್ತು ಬ್ಯಾಂಕಿನ ಹಿಂಬರಹವನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಚೆಕ್ ಮತ್ತು ಬ್ಯಾಂಕಿನ ಹಿಂಬರಹವನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ದಿನಾಂಕ 16-12-2014 ರಂದು ನಾನು ಯಾವುದೇ ದಾಖಲೆಗೆ ಸಹಿ ಮಾಡಿ ಅದನ್ನು ಆರೋಪಿಗೆ ಕಳುಹಿಸಿರುವುದಿಲ್ಲ. ಈ ಪ್ರಕರಣದಲ್ಲಿ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂಬ ವಿಚಾರವನ್ನು ನನ್ನ ವಕೀಲರ ಮೂಲಕ ತಿಳಿದುಕೊಂಡ ನಂತರ ಸಾಕ್ಷಿ ನುಡಿದಿರುತ್ತೇನೆ. ನಾನು ದಿನಾಂಕ 24-11-2014 ರಂದು ಆರೋಪಿಗೆ ತಿಳುವಳಿಕೆ ಪತ್ರವನ್ನು ಕಳುಹಿಸಿರುತ್ತೇನೆ. ಸದರಿ ತಿಳುವಳಿಕೆ ಪತ್ರಕ್ಕೆ ಸಂಬಂಧಪಟ್ಟಂತೆ ಆರೋಪಿಯು ಪ್ರತ್ಯುತ್ತರ ನೋಟೀಸ್ ಅನ್ನು ನೀಡಿರುತ್ತಾರೆ ಹಾಗೂ ಅದರ ಮಾಹಿತಿ ನನಗೆ ತಿಳಿದಿದೆ. ಪ್ರತ್ಯುತ್ತರ ತಿಳುವಳಿಕೆ ಪತ್ರದಲ್ಲಿ ಆರೋಪಿಯು ಬರೆದಿರುವ ವಿಚಾರಗಳ ಬಗ್ಗೆ ನಾನು ವಕೀಲರಿಂದ ಅಲ್ಪಸ್ವಲ್ಪ ತಿಳಿದುಕೊಂಡಿರುತ್ತೇನೆ.

ಆರೋಪಿಯು ಹಾಗೂ ನನ್ನ ಮಧ್ಯೆ ಹಲವಾರು ವರ್ಷಗಳಿಂದ ಒಳ್ಳೆಯ ಬಾಂದವ್ಯ ಹಾಗೂ ಸಂಬಂಧ ಇದೆ ಎಂದು ನಿಪಿ-3 ರಲ್ಲಿ ಬರೆಸಿದ್ದು ಅದಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ಆರೋಪಿಯು ತನ್ನ ಮನೆಯಲ್ಲಿ ಉಜ್ಜೀವನ್ ಫೈನಾನ್ಸ ನಡೆಸುತ್ತಿದ್ದರು ಹಾಗೂ ನನ್ನ ಹೆಂಡತಿ ಅವರ ಮನೆಗೆ ಹೋಗಿ ದುಡ್ಡನ್ನು ಕಟ್ಟುತ್ತಿದ್ದರು ಆದಕಾರಣ ಆರೋಪಿಯ ಪರಿಚಯ ನನಗೆ

ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ. ಸದರಿ ವಿಚಾರಕ್ಕೆ ಸಂಬಂಧಪಟ್ಟ ದಾಖಲೆಗಳು ನನ್ನ ಬಳಿ ಇದೆ.

ಆರೋಪಿಯ ನಿಮ್ಮ ಬಳಿ ಏತಕ್ಕಾಗಿ ಹಣವನ್ನು ಕೇಳಿದರು? ಎಂಬ ಪ್ರಶ್ನೆಗೆ ಸಾಕ್ಷಿ ಆರೋಪಿಯ ಮಗನಿಗೆ ಆಟೋ-ಮೊಬೈಲ್ ಅಂಗಡಿ ಇಟ್ಟುಕೊಡಬೇಕೆಂದು ಹಣವನ್ನು ಕೇಳಿದರು ಎಂದು ನುಡಿಯುತ್ತಾರೆ. ಆರೋಪಿಗೆ ಹಣವನ್ನು ನೀಡಿದಾಗ ಅವರಿಂದ Cheque Discount Form ಅನ್ನು ಪಡೆದುಕೊಂಡಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ಆರೋಪಿಯು ಹಣವನ್ನು ಪಡೆದ ತಕ್ಷಣ ಚೆಕ್ ಅನ್ನು ನೀಡಲಿಲ್ಲ, ನಂತರ ಚೆಕ್ ಅನ್ನು ನೀಡಿರುತ್ತಾರೆ ಹಾಗೂ ಅವರಿಂದ Cheque Discount Form ಅನ್ನು ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. Cheque Discount Form ಅನ್ನು ಪಡೆಯದೆ ಆರೋಪಿಗೆ ಹಣವನ್ನು ನೀಡಿರುವ ವಿಚಾರವನ್ನು ನನ್ನ ಖಾಸಗಿ ದೂರು, ತಿಳುವಳಿಕೆ ಪತ್ರ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಲು ನನಗೆ ತೊಂದರೆ ಇರಲಿಲ್ಲ. ಆರೋಪಿಯು ನನ್ನೊಂದಿಗೆ ಯಾವುದೇ ಹಣಕಾಸಿನ ವ್ಯವಹಾರವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಅಥವಾ ಆರೋಪಿಯ ಮಗನಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1ರ ಚೆಕ್ ನನ್ನ ಸ್ವಾಧೀನಕ್ಕೆ ಹೇಗೆ ಬಂತು ಎಂಬುದರ ಬಗ್ಗೆ ಆರೋಪಿಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಆರೋಪಿಯೇ ನನಗೆ ನಿಪಿ-1ರ ಚೆಕ್ ಅನ್ನು ನೀಡಿದರು ಎಂದು ನುಡಿಯುತ್ತಾರೆ. ನಿಪಿ-1ರ ಚೆಕ್ ಆರೋಪಿಯದಲ್ಲ ಎಂದರೆ ಸಾಕ್ಷಿ ನಿಪಿ-1ರ ಚೆಕ್ ಅನ್ನು ಆರೋಪಿಯಿಂದ ಪಡೆದಾಗ ಅದು ಆರೋಪಿಯದ್ದೆ ಚೆಕ್ ಎಂಬ ನಂಬಿಕೆ ಇತ್ತು ಆದರೆ ಚೆಕ್ ಬೌನ್ಸ್ ಆದಾಗ ಚೆಕ್ ಆರೋಪಿಯದಲ್ಲ ಎಂದು ತಿಳಿಯಿತು ಎಂದು ನುಡಿಯುತ್ತಾರೆ. ವಿಜಯಾ ಬ್ಯಾಂಕಿನ ಮ್ಯಾನೇಜರ್ ನೊಂದಿಗೆ ಶಾಮಿಲಾಗಿ ನಿಪಿ-2ರ ಹಿಂಬರಹವನ್ನು ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಿಜಯಾ ಬ್ಯಾಂಕ್ ಅಭಿಲಾಷ್ ಲೇಔಟ್ ನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ವಿಜಯಾ ಬ್ಯಾಂಕ್ ಹಾಗೂ ಅಭಿಲಾಷ್ ಲೇಔಟ್ ಮಧ್ಯೆ 8 ಸೈಟ್ ಗಳ ಅಂತರವಿದೆ. ನಾನು ವಿಜಯಾ ಬ್ಯಾಂಕಿನಲ್ಲಿ ಯಾವುದೇ ಎಲೆಕ್ಟ್ರಿಕಲ್ ಕೆಲಸ ಇದ್ದರೂ ಅದನ್ನು ನಾನೇ ಕೈಗೊಳ್ಳುತಿದ್ದ ಕಾರಣ ವಿಜಯಾ ಬ್ಯಾಂಕ್ ಸಿಬ್ಬಂಧಿಯೊಂದಿಗೆ ನನ್ನ ಸಂಬಂಧ ಚೆನ್ನಾಗಿ ಇತ್ತು ಎಂದರೆ ಸರಿಯಲ್ಲ. ನಾನು ವಾಹನಗಳ ಎಲೆಕ್ಟ್ರಿಕಲ್ ಕೆಲಸ ಮಾಡುತ್ತಿದ್ದು ಬ್ಯಾಂಕಿನ ಎಲೆಕ್ಟ್ರಾನಿಕ್ ಕೆಲಸ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ.

ಹೆಚ್.ಎನ್ ಗೋಪಾಲರಾವ್ ನನ್ನ ಅಣ್ಣ. ಅವರು ಹೊಸನಗರದಲ್ಲಿದ್ದಾರೆ ಎಂದರೆ ಸರಿ. ನನ್ನ ಅಣ್ಣ ಹೊಸ ನಗರದಲ್ಲಿ ಲಕ್ಷ್ಮೀ ಕೋಮ್ ಆನಂದ, ಅಗಸಾರಗಲ್ಲಿ ರವರ ವಿರುದ್ಧ ಸಿ.ಸಿ ನಂ. 600/2013 ರ ಪ್ರಕರಣವನ್ನು ಹೂಡಿರುತ್ತಾರೆ ಎಂದರೆ ಸರಿ. ನನ್ನ ಅಣ್ಣ ಗೌರಿಬಿದನೂರಿನಲ್ಲಿ

ಶಹಿನ್ ತಾಜ್ ಕೋಮ್ ಫಯಾಜ್ ರವರ ವಿರುದ್ಧ ಒಂದು ಪ್ರಕರಣವನ್ನು ಹೂಡಿರುತ್ತಾರೆ ಎಂದರೆ ಸರಿ. ಲಕ್ಷ್ಮೀ ಕೋಮ್ ಆನಂದ, ಅಗಸಾರಗಲ್ಲಿ ರವರ ವಿರುದ್ಧ ಹೂಡಿದ್ದ ಪ್ರಕರಣ ವಜಾಗೊಂಡಿತು ಹಾಗೂ ಶಹಿನ್ ತಾಜ್ ಕೋಮ್ ಫಯಾಜ್ ರವರ ವಿರುದ್ಧ ಹೂಡಿದ ಪ್ರಕರಣವು ನ್ಯಾಯಾಂಗ ವಾಪ್ತಿಯ ಆಧಾರದ ಮೇಲೆ ಗೌರಿಬಿದನೂರಿನ ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಲಯಕ್ಕೆ ವರ್ಗಾವಣೆ ಆಯಿತು ಎಂದರೆ ಗೊತ್ತಿಲ್ಲ. ಶಹಿನ್ ತಾಜ್ ಕೋಮ್ ಫಯಾಜ್ ರವರ ವಿರುದ್ಧ ಹೂಡಿದ ಪ್ರಕರಣವು ಗೌರಿಬಿದನೂರಿನಲ್ಲಿ ವಜಾಗೊಂಡಿರುತ್ತದೆ ಎಂದರೆ ಗೊತ್ತಿಲ್ಲ. ಈ ಮೂರು ಪ್ರಕರಣಗಳನ್ನು ಹೊರತುಪಡಿಸಿ ಬೇರೆ ಚೆಕ್ ಗಳಿಗೆ ಸಂಬಂಧಪಟ್ಟಂತೆ ನೋಟೀಸ್ ಗಳನ್ನು ಕಳುಹಿಸಿರುತ್ತೇನೆ ಹಾಗೂ ಪ್ರಕರಣಗಳನ್ನು ದಾಖಲಿಸಿರುತ್ತೇನೆ. ನಾನು ಆಧಾಯ ತೆರಿಗೆ ಕಟ್ಟುತ್ತಿಲ್ಲ. ನನ್ನ ಬಳಿ ಮನಿ ಲೆಂಡರ್ ಲೈಸೆನ್ಸ್ ಇರುವುದಿಲ್ಲ. ದಿನಾಂಕ 18-09-2014 ರಂದು ತುಮಕೂರಿನ ವಕೀಲರಾದ ಬಿ.ವಿ ಪ್ರಸನ್ನಕುಮಾರ ರವರ ಮೂಲಕ ಲಕ್ಷ್ಮೀ ಕೋಂ ಆನಂದರವರಿಗೆ ನೀವು ತಿಳುವಳಿಕೆ ಪತ್ರವನ್ನು ಕಳುಹಿಸಿರುತ್ತಿರಿ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ತಿಳುವಳಿಕೆ ಪತ್ರಕ್ಕೆ ದಿನಾಂಕ 30-09-2014 ರಂದು ಪ್ರತ್ಯೂತ್ತರ ತಿಳುವಳಿಕೆ ಪತ್ರ ಹಾಗೂ ನಿಡಿ-1 ರ ದಾಖಲೆಯ ಪ್ರತಿಯು ತಲುಪಿದ ಕಾರಣ ನಾನು ಮೋಸ ಮಾಡುತ್ತಿದ್ದೆನು ಎಂಬ ವಿಚಾರ ತುಮಕೂರಿನ ನನ್ನ ವಕೀಲರಿಗೆ ತಿಳಿದ ಕಾರಣ ಅವರು ಆ ಚೆಕ್ಕಿನ ಮೇಲೆ ಪ್ರಕರಣವನ್ನು ಹೂಡಿರುವುದಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮೀ ಕೋಂ ಆನಂದರವರು ಅವರ ವಕೀಲರ ಮೂಲಕ ನನಗೆ ಕಳುಹಿಸಿದ ತಿಳುವಳಿಕೆ ಪತ್ರವನ್ನು ನಾನು ತಿರಸ್ಕರಿಸಿ ಅಂಚೆ ಕಛೇರಿಯವರೊಂದಿಗೆ ಶಾಮಿಲಾಗಿ ಹಿಂತಿರುಗುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಗೌರಿಬಿದನೂರು ಶಾಖೆಯ ಚೆಕ್ ನಂ. 105894 ರ ಚೆಕ್ ಅನ್ನು ಲಕ್ಷ್ಮೀ ಕೋಂ ಆನಂದರವರಿಗೆ ಹಿಂತಿರುಗಿಸುವಂತೆ Future Financial Services Limited ರವರು ದಿನಾಂಕ 10-09-2014 ರಂದು ಒಂದು ಹಿಂಬರಹವನ್ನು ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ಲಕ್ಷ್ಮೀ ಕೋಂ ಆನಂದರವರಿಗೆ ಹಿಂತಿರುಗಿಸಿ ಎಂದು ನೀಡಿದ ಚೆಕ್ ಅನ್ನು ನಾನು ದುರುಪಯೋಗಪಡಿಸಿಕೊಂಡು ತುಮಕೂರಿನ ವಕೀಲರ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದೆನು ಎಂದರೆ ಸರಿಯಲ್ಲ. Future Financial Services Limited ರಲ್ಲಿ ನನ್ನ ಹೆಂಡತಿ Member ಆಗಿದ್ದು ನಾನು Member ಆಗಿರುವುದಿಲ್ಲ ಎಂದರೆ ಸರಿ. ಸಿ.ಸಿ ನಂ. 361/2015 ರಲ್ಲಿ ನಿಡಿ-1 ರಲ್ಲಿ ಗ್ರೂಪ್ ನೇಮ್ ಲಕ್ಷ್ಮೀ ಎಂದು ಬರೆದಿದ್ದು ಲಕ್ಷ್ಮೀ ಎಂದರೆ ಲಕ್ಷ್ಮೀ ಕೋಂ ಆನಂದ ಎಂದರೆ ಸರಿ. ಸಾಕ್ಷಿಯು ಒಂದು ಲಕ್ಷ್ಮೀ ಕೋಂ ಆನಂದ ಮತ್ತು ಆನಂದರವರ Client Monthly Repayment Card ಅನ್ನು ನೋಡಿ ಅವರ ಭಾವಚಿತ್ರವನ್ನು ಗುರುತಿಸಿದ್ದು ಸದರಿ Client Monthly Repayment Card ಅನ್ನು

ನಿಡಿ-3 ಎಂದು ಗುರುತಿಸಲಾಯಿತು. ಸದರಿ Future Financial Services Limited ರಲ್ಲಿ ಗ್ರೂಪ್ ಮೂಲಕ ಸಾಲ ಪಡೆದುಕೊಳ್ಳಬೇಕಾದರೆ ಪರಸ್ಪರ ಚೆಕ್ಕುಗಳ ಜಾಮೀನನ್ನು ಸದಸ್ಯರು ನೀಡಬೇಕು ಎಂದರೆ ಸಾಕ್ಷಿ ಚೆಕ್ಕುಗಳ ಜಾಮೀನು ನೀಡಬೇಕಾಗಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸಾಲವನ್ನು ಪಡೆದುಕೊಳ್ಳುವಾಗ ಆಧಾರವಾಗಿ ಚೆಕ್, ಜಮೀನು, ಆನ್ ಡಿಮ್ಯಾಂಡ್ ಪ್ರಾಮಿಸರಿ ನೋಟ್, ಅಥವಾ ಇತರೆ ದಾಖಲೆಗಳನ್ನು ನೀಡಬೇಕಾಗುತ್ತದೆ ಎಂದರೆ ಸರಿ. Future Financial Services Limited ರಲ್ಲಿ ನನ್ನ ಹೆಂಡತಿ ಸದಸ್ಯರು ಎಂದರೆ ಸರಿ.

ನನ್ನ ಹೆಂಡತಿ Future Financial Services Limited ರವರಿಂದ ಸಾಲ ಪಡೆದುಕೊಳ್ಳುವ ಸಲುವಾಗಿ ಲಕ್ಷ್ಮೀ ರವರು 218447 ಸಂಖ್ಯೆಯ ಚೆಕ್ ಅನ್ನು ಆಧಾರವಾಗಿ ನೀಡಿದ್ದರು ಎಂದು Future Financial Services Limited ರವರು ದಿನಾಂಕ 25-06-2014 ರಂದು ಹಿಂಬರಹವನ್ನು ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ನನ್ನ ಹೆಂಡತಿ, ಲಕ್ಷ್ಮೀ ಹಾಗೂ ಜಯಮ್ಮ ರವರು ಮತ್ತು ಇತರರು Future Financial Services Limited, ಸ್ಪಂದನಾ ಸ್ಪೂರ್ತಿ ಪೈನಾನ್ಸಿಯಲ್ ಲಿಮಿಟೆಡ್ ಹಾಗೂ ಉಜ್ಜೀವನ್ ಪೈನಾನ್ಸಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ರ ಲೀಡರ್ ಗಳಾಗಿದ್ದು ನನ್ನ ಹೆಂಡತಿ ಸಾಲವನ್ನು ಸರಿಯಾಗಿ ಮರುಪಾವತಿಸಿಲ್ಲ ಎಂದು ಇತರರು ಕಟ್ಟಿಕೊಟ್ಟ ಕಾರಣ ಅವರ ಮೇಲೆ ದ್ವೇಶ ಸಾದಿಸಲು ನನ್ನ ಹೆಂಡತಿಯ ಒತ್ತಾಯದ ಮೇರೆಗೆ ನಾನು ಮತ್ತು ನನ್ನ ಅಣ್ಣ ಸೇರಿ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣವನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಒತ್ತಾಯದ ಮೇರೆಗೆ Future Financial Services Limited ರವರು ಹಿಂತುರುಗಿಸಿದ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಸುಳ್ಳು ತಿಳುವಳಿಕೆ ಪತ್ರಗಳನ್ನು ಜಾರಿ ಮಾಡಿ ಸುಳ್ಳು ಪ್ರಕರಣಗಳನ್ನು ಹೂಡಿ ಸದರಿ ವಿಚಾರದ ಮೇರೆಗೆ ಆ ಎಲ್ಲಾ ಪ್ರಕರಣಗಳು ವಜಾಗೊಂಡಿರುತ್ತವೆ ಎಂದರೆ ಗೊತ್ತಿಲ್ಲ. ತುಮಕೂರಿನ ವಕೀಲರ ಮೂಲಕ ಕಳುಹಿಸಿದ ತಿಳುವಳಿಕೆ ಪತ್ರ ಸುಳ್ಳಾಗಿದ್ದ ಕಾರಣ ಅವರು ಪ್ರಕರಣವನ್ನು ದಾಖಲಿಸಿರುವುದಿಲ್ಲ ಎಂದರೆ ಗೊತ್ತಿಲ್ಲ. Future Financial Services Limited ಹಿಂತಿರುಗಿಸಿರುವ ಹಲವಾರು ಚೆಕ್ ಗಳನ್ನು ಇಟ್ಟುಕೊಂಡು ನನ್ನ ಹೆಂಡತಿಯ ಒತ್ತಾಯದ ಮೇರೆಗೆ ಸುಳ್ಳು ಪ್ರಕರಣಗಳನ್ನು ದಾಖಲಿಸಿರುತ್ತೇವೆ ಎಂದರೆ ಗೊತ್ತಿಲ್ಲ.

ಈ ಪ್ರಕರಣದಲ್ಲಿ ಹಾಜರುಪಡಿಸಿರುವ ನಿಪಿ-1 ರ ಚೆಕ್ ನಂ. 137127 ಆಗಿರುತ್ತದೆ. ನಿಪಿ-1 ರಲ್ಲಿ ಅಕೌಂಟ್ ನಂ. 20561 ಎಂದು ಬರೆದಿದ್ದು ದಿನಾಂಕ 24-11-2014 ಎಂದು ನಮೂದಾಗಿರುತ್ತದೆ. ಸಿ.ಸಿ ನಂ. 361/2015 ರಲ್ಲಿ ನಿಪಿ-1 ರ ಚೆಕ್ ನಂ. 137126

ಆಗಿರುತ್ತದೆ. ಈ ಪ್ರಕರಣದ ನಿಪಿ-1ರ ಚೆಕ್ ಸಹ ಸಿ.ಸಿ ನಂ. 367/2015 ರಲ್ಲಿನಿಡಿ- 5ರ ಪಾಸ್ ಬುಕ್ ಗೆ ಸಂಬಂಧಪಟ್ಟ ಚೆಕ್ ಎಂದರೆ ಸರಿ.

**(**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು**)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು